# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಚಾ.ಸಾ. 78

ಪ್ರಾ.ಸಾ. 48

| | | |
|---|---|---|
| ಸಾಕ್ಷಿದಾರರ ಹೆಸರು | – | ಲಕ್ಷ್ಮಣ ನಾಯ್ಕ |
| ತಂದೆಯ ಹೆಸರು | – | ತಿಮ್ಮಾ ನಾಯ್ಕ |
| ವಯಸ್ಸು | – | 45 ವರ್ಷ |
| ಉದ್ಯೋಗ | – | ಪೆಟ್ರೋಲ್ ಬಂಕ್‌ನಲ್ಲಿ ಕೆಲಸ |
| ವಾಸ್ತವ್ಯ | – | ಸಿದ್ದಾಪುರ |

(ಇಂದು ದಿನಾಂಕಃ 06–04–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು ನವತಾರಾ ಲಾಡ್ಜನಲ್ಲಿ ನಾನು 2000 ರಿಂದ 3 ವರ್ಷಗಳ ಕಾಲ ರೂಮ್ ಬಾಯ್ ಆಗಿ ಕೆಲಸ ಮಾಡುತ್ತಿದ್ದೆ. ಆಗ ನನ್ನ ಜೊತೆ ಚಾ.ಸಾ. 77 ರವರು ನನ್ನೊಂದಿಗೆ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ನಮ್ಮ ಲಾಡ್ಜನಲ್ಲಿ ನೌಕರಿಗೆ ಸಂಬಂಧಪಟ್ಟಂತೆ ಯಾವುದೇ ಮೋಸ, ವಂಚನೆಯ ಕೇಸ್ ಆಗಿದ್ದರ ಬಗ್ಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. 1 ರಿಂದ 5 ನೇ ಆರೋಪಿತರನ್ನು ನೋಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ದಿನಾಂಕಃ 21–05–2002 ರಂದು ನಾನು ಬೆಳಿಗ್ಗೆ 7.40 ಗಂಟೆ ಸಮಯದಲ್ಲಿ ರೂಮ್ ಬಾಯ್ ಆಗಿ ಕರ್ತವ್ಯದಲ್ಲಿದ್ದಾಗ 1 ರಿಂದ 4 ನೇ ಆರೋಪಿತರು ನಮ್ಮ ಲಾಡ್ಜ್ ಗೆ ಬಂದು 218 ನೇ ರೂಮ್‌ನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಅವರನ್ನು ರೂಮಿಗೆ ಕರೆದುಕೊಂಡು

ಹೋಗಿ ಬಿಟ್ಟು ರೂಮ್‌ನ್ನು ಸ್ವಚ್ಛಗೊಳಿಸಿದ್ದೆ ಎಂದರೆ ಸರಿಯಲ್ಲ. ಸದರಿಯವರು ಕೆಎ-25-ಎಂ-2037 ನೇ ವಾಹನದಲ್ಲಿ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ನಮ್ಮ ಲಾಡ್ಜನಲ್ಲಿ ಹಲವಾರು ಯುವಕ-ಯುವತಿಯರಿಗೆ ನೌಕರಿ ಕೊಡಿಸುವುದಾಗಿ ಅವರಿಂದ ಹಣ ಪಡೆದು ಮೋಸ ಮಾಡಿರುವ ವಿಷಯ ನನಗೆ ತಿಳಿದು ಬಂದಿದೆ ಎಂದರೆ ಸರಿಯಲ್ಲ. ದಿನಾಂಕ 27-08-2002 ರಂದು ನಾನು ----------- ಖಾತ್ರಿಯಾಯಿತು ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ. 47 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ